## ಕ್ಯಾನ್ಸರ್ ಹಂತಗಳು

ದೇಹದ ಯಾವುದೇ ಭಾಗದಲ್ಲಿ ಗಡ್ಡೆಯಾಗಿದ್ದರೆ, ಅದು ನೋವಿನಿಂದ ಕೂಡಿರುವುದಿಲ್ಲ. ಆದರೆ ಸದ್ದಿಲ್ಲದೆ ದೇಹವನ್ನು ಇಂಚು ಇಂಚಾಗಿ ವ್ಯಾಪಿಸಲಾರಂಭಿಸುತ್ತದೆ. ಅದು ಕ್ಯಾನ್ಸರ್ ಎಂದು ಪತ್ತೆಯಾದಾಗ, ಶರೀರದಲ್ಲಿ ಎಷ್ಟರಮಟ್ಟಿಗೆ ಹರಡಿದೆ ಎಂಬುದನ್ನು ಸೂಚಿಸುವ ಸಂಗತಿಯನ್ನು 'ಕ್ಯಾನ್ಸರ್ ಹಂತ' ಎನ್ನಲಾಗುತ್ತದೆ. ಸ್ತನ ಕ್ಯಾನ್ಸರ್, ಕೋಲನ್ ಕ್ಯಾನ್ಸರ್, ಶ್ವಾಸಕೋಶ, ಗರ್ಭಕೋಶ ಕ್ಯಾನ್ಸರ್, ಮೆದುಳಿನ ಕ್ಯಾನ್ಸರ್, ರಕ್ತ ಕ್ಯಾನ್ಸರ್, ಮೂಳೆ ಕ್ಯಾನ್ಸರ್ ಇತ್ಯಾದಿ ಘನರೂಪದ ಗಡ್ಡೆಗಳಾಗಿ ಕಾಡುತ್ತದೆ. ಇದನ್ನು ನಾಲ್ಕು ಹಂತಗಳಲ್ಲಿ ಗುರುತಿಸಲಾಗುತ್ತದೆ. ಕ್ಯಾನ್ಸರ್ ಹಂತವನ್ನು 0, 1, 2, 3 ಮತ್ತು 4 ಎಂಬ ಸಂಖ್ಯೆಗಳ ಮೂಲಕ ವಿವರಿಸಲಾಗುತ್ತದೆ.

**ಹಂತ 0:** ಈ ಹಂತದಲ್ಲಿ ಕ್ಯಾನ್ಸರ್ ಕೋಶಗಳು ಒಂದು ನಿರ್ದಿಷ್ಟ ಜಾಗದಲ್ಲಿ ಉಪಸ್ಥಿತವಾಗಿರುತ್ತವೆ ಮತ್ತು ಅವು ಇನ್ನೂ ವೃದ್ಧಿಯಾಗಿ ಹರಡಿರುವುದಿಲ್ಲ.

**ಹಂತ 1:** ಈ ಹಂತದಲ್ಲಿ ಕ್ಯಾನ್ಸರ್ ಕೋಶಗಳು ಹತ್ತಿರದ ಸ್ನಾಯುಗಳಿಗೆ ಸ್ವಲ್ಪಮಟ್ಟಿಗೆ ಹರಡಿರುತ್ತವೆ. ಆದರೆ ಅವು ಬೇರೆ ಲಿಂಫ್ ನೋಡ್‌ಗಳಿಗೆ ಅಥವಾ ಇತರ ಅಂಗಗಳಿಗೆ ಹರಡಿರುವುದಿಲ್ಲ.


**ಹಂತ 2-3 ನಡುವಿನದ್ದು:** ಈ ಹಂತಗಳಲ್ಲಿ ಕ್ಯಾನ್ಸರ್ ಹತ್ತಿರದ ಸ್ನಾಯುಗಳಿಗೆ ಅಥವಾ ಲಿಂಫ್ ನೋಡ್‌ಗಳಿಗೆ ಹರಡಿರುತ್ತದೆ.

**ಹಂತ 4:** ಈ ಹಂತದಲ್ಲಿ ಕ್ಯಾನ್ಸರ್ ರೋಗ ಉಲ್ಬಣವಾಗಿರುತ್ತದೆ ಹಾಗೂ ಶರೀರದ ಇತರ ಭಾಗಗಳಿಗೆ ಹರಡಿರುತ್ತದೆ.

ತಪಾಸಣೆಗೊಳಗಾದಾಗ ತಕ್ಷಣ ಮ್ಯಾಮೊಗ್ರಾಮ್ ಮಾಡಿಸಲು ಸೂಚಿಸಿದರು. ಬಳಿಕ ಬಯಾಪ್ಸಿ, ಎಲ್ಲವೂ ಪಾಸಿಟಿವ್ ಬಂದಾಗ ಚಿಕಿತ್ಸೆ ನೀಡಿಸ್ತನವನ್ನೇ ಸರ್ಜರಿ ಮೂಲಕ ತೆಗೆದುಹಾಕಲಾಯಿತು. ಹೊಸ ತಂತ್ರಜ್ಞಾನದ ಮೂಲಕ ಚಿಕಿತ್ಸೆ ನೀಡಿದ್ದು, ಸರ್ಜರಿ ಬಳಿಕ ಕೀಮೊಥೆರಪಿ ಆಗಲಿ, ರೇಡಿಯೇಷನ್ ಥೆರಪಿಯಾಗಲಿ ತೆಗೆದುಕೊಂಡಿಲ್ಲ. ಒಂದೇ ತಿಂಗಳಲ್ಲಿ ಗುಣಮುಖಳಾದೆ, ಎರಡು ತಿಂಗಳಲ್ಲಿ ಸಹಜ ಸ್ಥಿತಿಗೆ ಮರಳಿದೆ. ಕಾರು ಡ್ರೈವಿಂಗ್ ಮಾಡುತ್ತಾ, ನನ್ನ ದೈನಂದಿನ ಕೆಲಸಗಳಲ್ಲಿ ಸಕ್ರಿಯಳಾಗಿದ್ದೇನೆ. ಹೀಗಾಗಿ ಕ್ಯಾನ್ಸರ್ ಬಂದರೆ ಹೆದರಬೇಕಿಲ್ಲ, ಆತ್ಮವಿಶ್ವಾಸ ಬೆಳೆಸಿಕೊಳ್ಳಿ ಎಂಬುದೇ ನನ್ನ ಸಲಹೆ.

***

ಪಾಸಿಟಿವ್ ಚಿಂತನೆ ಇದ್ದರೆ ಕ್ಯಾನ್ಸರ್ ಅನ್ನು ಖಂಡಿತವಾಗಿಯೂ ಗೆಲ್ಲಬಹುದು ಎಂಬುದಕ್ಕೆ ಸುಂದರರಾಜನ್ ಅವರೇ ತಾಜಾ ನಿದರ್ಶನವಾಗುತ್ತಾರೆ. 'ಕಳೆದ ಒಂದೂವರೆ ವರ್ಷದ ಹಿಂದೆ ನನ್ನ ದೈನಂದಿನ ಚಟುವಟಿಕೆಯಲ್ಲಿ ಏನೋ ವ್ಯತ್ಯಾಸ ಆಗುತ್ತಿದೆ ಎನಿಸಿತು. ಹೊಟ್ಟೆಯಲ್ಲಿ ತಳಮಳ. ಬೆಂಕಿ ಬಂದ ಹಾಗೆ ಉರಿ ಉರಿ. ತಕ್ಷಣ ವೈದ್ಯರನ್ನು ಸಂಪರ್ಕಿಸಿದೆ. ಅವರು ಇದು ಗುದನಾಳದ ಉಬ್ಬರ (colon inflation) ಎಂದಲ್ಲದೆ ಒಮ್ಮೆ ಕೋಲನೊಸ್ಕೊಪಿ ಮಾಡಿಸು ಎಂದೂ ಸಲಹೆ ನೀಡಿದರು. ಹಾಗೆ ಕೋಲನೊಸ್ಕೊಪಿ ಮಾಡಿಸಿದಾಗ ಟ್ಯೂಮರ್ ಇರುವುದು ಪತ್ತೆಯಾಯಿತು. ಕ್ಯಾನ್ಸರ್ ತಜ್ಞರ ಬಳಿ ಹೋಗಿ ಸಮಗ್ರ ಪರೀಕ್ಷೆ ಮಾಡಿಸಿದೆ. ರಿಪೋರ್ಟ್‌ನಲ್ಲಿ ಕ್ಯಾನ್ಸರ್ ಮೂರನೇ ಹಂತಕ್ಕೆ ಹೋಗಿದ್ದು ಖಚಿತವಾಯಿತು. ಇದಕ್ಕೆ ಸೂಕ್ತ ಚಿಕಿತ್ಸೆ ಪಡೆದೆ. ಈಗ ಸಂಪೂರ್ಣ ಗುಣಮುಖನಾಗಿದ್ದೇನೆ. ಹೀಗಾಗಿ ಕ್ಯಾನ್ಸರ್ ಬಂದಾಗ ಕುಗ್ಗದೆ ಪಾಸಿಟಿವ್ ಆಗಿ ನಾನು ಇದನ್ನು ಗೆದ್ದೇಗೆಲ್ಲುತ್ತೇನೆ ಎಂಬ ಛಲ, ಆತ್ಮವಿಶ್ವಾಸ ಬೆಳೆಸಿಕೊಂಡರೆ ಈ ಮಹಾಮಾರಿಯನ್ನು ಗೆಲ್ಲಲು ಖಂಡಿತಾ ಸಾಧ್ಯ'.



***

ಈ ಮೇಲಿನ ನಾಲ್ಕೂ ಉದಾಹರಣೆಗಳು ಕ್ಯಾನ್ಸರ್ ಗೆದ್ದವರು ಹೇಳಿದ ನೈಜ ಕಥೆ. ಇವರೆಲ್ಲರೂ



> ಅಪೋಲೊ ಕ್ಯಾನ್ಸರ್ ಸೆಂಟರ್‌ನಲ್ಲಿ ಕ್ಯಾನ್ಸರ್ ಗುಣಮುಖ ಆದವರಿಗೆ 'ಕ್ಯಾನ್‌ವಿನ್' ಎಂಬ ಒಂದು ತಂಡವನ್ನು ರಚಿಸಲಾಗಿದೆ. ಈ ಕಾಯಿಲೆ ಪಯಣದಲ್ಲಿ ಎಲ್ಲರಿಗೂ ನೈತಿಕ ಬೆಂಬಲ ನೀಡುವ ಗುಂಪು ಇದಾಗಿದೆ.
>
> **-ಡಾ. ಜಯಂತಿ ಟುಮ್ಸಿ**
> **ಸ್ತನ ಕ್ಯಾನ್ಸರ್ ಶಸ್ತ್ರಚಿಕಿತ್ಸಕಿ**

ಅಪೋಲೊ ಆಸ್ಪತ್ರೆ ಆರಂಭಿಸಿರುವ ಕ್ಯಾನ್ಸರ್ ಗೆದ್ದವರ ಕಥೆ–ವ್ಯಥೆಯನ್ನು ಹಂಚಿಕೊಳ್ಳುವ 'ಕ್ಯಾನ್‌ವಿನ್' ಗುಂಪಿನ ಸದಸ್ಯರು. ಕ್ಯಾನ್ಸರ್ ಬಂದು ಮಾನಸಿಕವಾಗಿ ಕುಗ್ಗಿದವರಿಗೆ ಸಾಂತ್ವನ ಹೇಳುವ, ಕುಟುಂಬದವರಿಗೆ ಧನಾತ್ಮಕ ಚಿಂತನೆ ನಡೆಸಲು ಸೂಚಿಸುವ, ಆ ಮೂಲಕ ಕ್ಯಾನ್ಸರ್ ಭಯವನ್ನು ದೂರ ಮಾಡುವ ಕಾಯಕವನ್ನು ಈ ಗುಂಪು ಮಾಡುತ್ತದೆ.

'ಕ್ಯಾನ್ಸರ್ ಕಾಯಿಲೆ ಬರೀ ದೈಹಿಕವಾಗಿಯಷ್ಟೇ ಗಾಸಿಗೊಳಿಸುವುದಲ್ಲ, ಮಾನಸಿಕವಾಗಿಯೂ ಬಹಳ ಹಿಂಸೆ ನೀಡುವ ಮಹಾಮಾರಿ. ಕ್ಯಾನ್ಸರ್ ಬಂದವರಿಗೆ ಆತಂಕ, ಉದ್ವೇಗ, ಖಿನ್ನತೆ, ಕೀಳರಿಮೆ ಎಲ್ಲವೂ ಬಾಧಿಸುತ್ತದೆ. ಇಂಥವರಿಗೆ ತಜ್ಞರ ಸಲಹೆ ಅಷ್ಟೇ ಸಾಕಾಗುವುದಿಲ್ಲ. ಸಮಾನ ಮನಸ್ಕ ರೋಗಿಗಳಿಂದ ಅನುಭವ, ಅನಿಸಿಕೆ, ಅಭಿಪ್ರಾಯ, ತವಕ ತಲ್ಲಣಗಳ ಪರಸ್ಪರ ವಿನಿಮಯ ಎಲ್ಲವೂ ಅಗತ್ಯವಾಗಿ ಬೇಕಾಗುತ್ತದೆ. ಕ್ಯಾನ್ಸರ್ ರೋಗಿಗೆ ಚಿಕಿತ್ಸೆ ನೀಡುವ ಜೊತೆಗೆ ಅವರ ಕುಟುಂಬದ ಸದಸ್ಯರಿಗೂ ತಿಳಿವಳಿಕೆ, ಅರಿವು ಮೂಡಿಸಬೇಕು. ರೋಗಿಯ ಮನಸ್ಸಿಗೆ ಸಮಾಧಾನವಾಗುವ ಮಾತುಗಳನ್ನು ಆಡುವ ಮೂಲಕ ನೈತಿಕ ಸ್ಥೈರ್ಯ ತುಂಬುವ ಅಗತ್ಯವಿದೆ' ಎಂದು ಹೇಳುತ್ತಾರೆ ಬೆಂಗಳೂರಿನ ಅಪೋಲೊ ಆಸ್ಪತ್ರೆಯಲ್ಲಿ ಸ್ತನ ಕ್ಯಾನ್ಸರ್ ಶಸ್ತ್ರಚಿಕಿತ್ಸಕಿಯಾಗಿರುವ ಡಾ. ಜಯಂತಿ ಟುಮ್ಸಿ.

'ಕ್ಯಾನ್ಸರ್ ಗುಣಮುಖರಾದವರಿಗೆ ಮನಸ್ಸಿಗೆ ನೆಮ್ಮದಿ ನೀಡುವ, ಸಮಾಧಾನ– ಸಾಂತ್ವನ ಹೇಳುವ, ಚಿಕಿತ್ಸೆ, ಔಷಧಿಗಳ ಜೊತೆಗೆ ಪೂರಕವಾದ ಆರೋಗ್ಯಪೂರ್ಣ ಹಾಗೂ ನೆಮ್ಮದಿಯ ವಾತಾವರಣವೂ ಬೇಕಾಗುತ್ತದೆ. ಬೆಂಗಳೂರಿನಂಥ ಸದಾ ಜಂಜಡದಿಂದ ಕೂಡಿದ ಪರಿಸರದಲ್ಲಿ ನೆಮ್ಮದಿ ಅರಸುವ ತಾಣ ಬೇಕು, ಜೊತೆಗೆ ತಮ್ಮ ಕಷ್ಟವನ್ನು ಅರಿತು ಸಾಂತ್ವನ ಹೇಳುವ ಸಹೃದಯರ ಅಗತ್ಯವಿದೆ' ಎನ್ನುವ ಅವರು, 'ಕ್ಯಾನ್ಸರ್‌ನಂತಹ ಮಹಾಮಾರಿಯಿಂದ ಬಳಲಿ ಸಂಪೂರ್ಣವಾಗಿ ಗುಣಮುಖರಾಗಿದ್ದವರೂ ಜೀವನದಲ್ಲಿ ಡಿಪ್ರೆಷನ್‌ಗೆ ಹೋಗ್ತಾರೆ. ಇವರನ್ನು ಪೋಷಿಸಿ, ಚಿಕಿತ್ಸೆ ಕೊಡಿಸಿ ಆರೈಕೆ ಮಾಡಿದ ಮನೆಯವರೂ ತೀರಾ ನೊಂದಿರುತ್ತಾರೆ. ಆರ್ಥಿಕ ಹೊರೆಯ ಜೊತೆಗೆ ಆರೋಗ್ಯ ಕಾಳಜಿಯ ಬಗ್ಗೆ ತೀವ್ರ ಆತಂಕಕ್ಕೂ ಒಳಗಾಗಿರುತ್ತಾರೆ. ಇಂಥವರಿಗೆ ಸೂಕ್ತ ರೀತಿಯ ಸಾಂತ್ವನ ಜೊತೆಗೆ ಭಾವನಾತ್ಮಕ ಕಾಳಜಿಯೂ ಬೇಕಾಗುತ್ತದೆ' ಎಂದು ವಿವರ ನೀಡುತ್ತಾರೆ ಡಾ. ಜಯಂತಿ.

'ಕ್ಯಾನ್ಸರ್ ಬಂದವರಿಗೆ ಆ ರೋಗಕ್ಕೆ ಚಿಕಿತ್ಸೆ ನೀಡುವುದರ ಜೊತೆಗೆ ಇವರಿಗೆ ಮಾನಸಿಕ ಸ್ಥೈರ್ಯ ತುಂಬಬೇಕು. ಸಾಮಾಜಿಕ ದೃಷ್ಟಿಕೋನದಿಂದ ಇವರಿಗೆ ಬೆಂಬಲ ನೀಡಬೇಕು. ಮಕ್ಕಳಿಗೆ ಕ್ಯಾನ್ಸರ್ ಬಂದಾಗ ಸ್ಟೆಮ್‌ಸೆಲ್ ಥೆರಪಿಯನ್ನೂ ನೀಡಬಹುದು. ಬೋನ್‌ಮಾರೊ ಟ್ರಾನ್ಸ್‌ಪ್ಲಾಂಟ್ ಮೂಲಕ ಸೂಕ್ತ ಚಿಕಿತ್ಸೆ ನೀಡಿ ಗುಣಮುಖರನ್ನಾಗಿ ಮಾಡಬಹುದು' ಎಂದು ಮಾಹಿತಿ ನೀಡುತ್ತಾರೆ ಇದೇ ಆಸ್ಪತ್ರೆಯಲ್ಲಿ ಹೆಮಟಾಲಜಿಸ್ಟ್ ಆಗಿರುವ ಡಾ. ನೀಮಾ.

ಕ್ಯಾನ್ಸರ್ ಚಿಕಿತ್ಸೆ ಮತ್ತು ಆರೈಕೆ ಮಾಡುವಾಗ ಮಾನವೀಯತೆಯ ನೆಲೆ, ಭಾವನಾತ್ಮಕ ಸೆಲೆ. ಪ್ರೀತಿಯ ಒಡನಾಟ, ರೋಗಿಯ ಕಾಯಿಲೆಯನ್ನು ಗುಣಪಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಇದೇ ಕಾರ್ಯವನ್ನು 'ಕ್ಯಾನ್‌ವಿನ್' ಕೂಡ ಮಾಡಬಲ್ಲದು. ಇದೇ ರೀತಿ ಎಲ್ಲ ಕ್ಯಾನ್ಸರ್ ಆಸ್ಪತ್ರೆಗಳಲ್ಲಿ ಕ್ಯಾನ್ಸರ್ ಗೆದ್ದವರು ತಮ್ಮ ಅನುಭವ ಹಂಚಿಕೊಳ್ಳುವ ಕಾರ್ಯಕ್ರಮ ಹಮ್ಮಿಕೊಂಡರೆ ಕ್ಯಾನ್ಸರ್ ಬಂದರೂ ಹೆದರಿ ಚಿಕಿತ್ಸೆಗೆ ಬರದೆ ಮನೆಯಲ್ಲೇ ಕುಳಿತು ಜೀವನವನ್ನೇ ಹೈರಾಣಾಗಿಸುವ ರೋಗಿಗಳ ಬದುಕು ಹಸನಾಗಬಹುದು.

ಪ್ರತಿಕ್ರಿಯಿಸಿ: feedback@sudha.co.in